ರಾಜ್ಯದಲ್ಲಿ 14 ಪಾರಂಪರಿಕ ಪ್ರದೇಶಗಳ ಇನ್‌ವೆಂಟರಿ ಕಾರ್ಯವು ಪ್ರಗತಿಯಲ್ಲಿದ್ದು, ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಪೂರ್ಣಗೊಳ್ಳಲಿದೆ.

ರಾಷ್ಟ್ರೀಯ ಸ್ಮಾರಕಗಳು ಮತ್ತು ಪ್ರಾಚೀನ ಅವಶೇಷಗಳ ಅಭಿಯಾನ, ನವದೆಹಲಿ, ಇವರ ವತಿಯಿಂದ ರಾಷ್ಟ್ರೀಯ ದಾಖಲೀಕರಣ ಪುಸ್ತಕವನ್ನು ತಯಾರಿಸುತ್ತಿದ್ದು, ಈ ನಿಟ್ಟಿನಲ್ಲಿ ರಾಜ್ಯದಲ್ಲಿರುವ ಮೂರ್ತ ಮತ್ತು ಅಮೂರ್ತ ಪರಂಪರೆಯ ಅಪೂರ್ವ ಕಲಾಸಂಪತ್ತಿನ ದಾಖಲೀಕರಣ ಕಾರ್ಯವನ್ನು ಮಾಡುವ ನಿಟ್ಟಿನಲ್ಲಿ ಅನುದಾನವನ್ನು ನೀಡಲಿದ್ದು, ಈ ಕಾರ್ಯಕ್ರಮವು ಇನ್ನೂ 3 ವರ್ಷಗಳ ಅವಧಿಯೊಳಗೆ ಪೂರ್ಣಗೊಳ್ಳಲಿದೆ.

ಸ್ಮಾರಕಗಳ ಸಂರಕ್ಷಣೆ ಹಾಗೂ ರಕ್ಷಣೆಯು ಇಲಾಖೆಯ ನಿರಂತರ ಕ್ರಿಯೆಯಾಗಿದ್ದು, ಪ್ರತಿ ಸಾಲಿನಲ್ಲಿಯೂ ಸ್ಮಾರಕಗಳ ಸಂರಕ್ಷಣೆಗೆ ಕ್ರಮವಹಿಸಲಾಗುತ್ತಿದೆ.

ಆ) ಮಾಹಿತಿಯನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

ಇ) ಮಾಹಿತಿಯನ್ನು ಅನುಬಂಧ–3ರಲ್ಲಿ ಒದಗಿಸಲಾಗಿದೆ.

ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ

252 (594), ಶ್ರೀ ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ರಾಜ್ಯದಲ್ಲಿರುವ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಪ್ರತಿ ಜಿಲ್ಲೆಯಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕೊರತೆ ಇರುವ ಉಪನ್ಯಾಸಕರುಗಳ ಸಂಖ್ಯೆ ಎಷ್ಟು;

ಆ) ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಪ್ರಸಕ್ತ ಸಾಲಿನಲ್ಲಿ ಕೊರತೆಯಿರುವ ಎಲ್ಲಾ ಪದವಿ ಕಾಲೇಜುಗಳಿಗೆ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೆ;

ಇ) ಹಾಗಿದ್ದಲ್ಲಿ, ಎಷ್ಟು ಉಪನ್ಯಾಸಕರನ್ನು ಪ್ರಸಕ್ತ ಸಾಲಿನಲ್ಲಿ ನೇಮಕಾತಿ ಮಾಡಿಕೊಳ್ಳಲಾಗುವುದು?

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಬಂದಿದೆ

ವಿವರ ಈ ಕೆಳಕಂಡಂತಿದೆ

ಕ್ರ. ಸಂ.	ಜಿಲ್ಲೆ	ಬೋಧಕರ ಖಾಲಿ ಹುದ್ದೆಗಳ ಸಂಖ್ಯೆ	ಕ್ರ. ಸಂ.	ಜಿಲ್ಲೆ	ಬೋಧಕರ ಖಾಲಿ ಹುದ್ದೆಗಳ ಸಂಖ್ಯೆ
1	ಬಾಗಲಕೋಟೆ	81	16	ಕಲಬುರಗಿ	29
2	ಬೆಂಗಳೂರು(ನಗರ)	51	17	ಯಾದಗಿರಿ	34
3	ಬೆಂಗಳೂರು (ಗ್ರಾಮಾಂತರ)	20	18	ಹಾಸನ	108
4	ಬೆಳಗಾವಿ	65	19	ಹಾವೇರಿ	42
5	ಬಳ್ಳಾರಿ	62	20	ಕೊಡಗು	32
6	ಬೀದರ್	24	21	ಕೋಲಾರ	40
7	ವಿಜಯಪುರ	85	22	ಕೊಪ್ಪಳ	56
8	ಚಾಮರಾಜನಗರ	43	23	ಮಂಡ್ಯ	45
9	ಚಿಕ್ಕಮಗಳೂರು	55	24	ಮೈಸೂರು	104
10	ಚಿತ್ರದುರ್ಗ	63	25	ರಾಯಚೂರು	72
11	ಚಿಕ್ಕಬಳ್ಳಾಪುರ	18	26	ರಾಮನಗರ	30
12	ದಕ್ಷಿಣ ಕನ್ನಡ	69	27	ಶಿವಮೊಗ್ಗ	72
13	ದಾವಣಗೆರೆ	33	28	ತುಮಕೂರು	67
14	ಧಾರವಾಡ	29	29	ಉಡುಪಿ	43
15	ಗದಗ	50	30	ಉತ್ತರ ಕನ್ನಡ	82

ಆ) ಮತ್ತು ಇ) ಹೌದು.

ಇಲಾಖೆಯಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳಲ್ಲಿ ಒಟ್ಟು 1298 ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ.